# ಅಸ್ಸಾಮಿನ ಮಿಂಚು

■ ಪ್ರವೀಣ ಕುಲಕರ್ಣಿ



'ಮಾಯಾಬಿನಿ... ಮಾಯಾಬಿನಿ' ಎಂಬ ಸಾಲನ್ನು ಗುನುಗುತ್ತಾ, ಕಣ್ಣೀರು ಸುರಿಸುತ್ತಾ ಸುಮಾರು ಹದಿನೈದು ಲಕ್ಷ ಜನ ತಮ್ಮ ಕಣ್ಮಣಿಗೆ ವಿದಾಯ ಹೇಳಲು ರಸ್ತೆಯಲ್ಲಿ ಕಾಯುತ್ತಾ ನಿಂತಿದ್ದರು. ಸಿಂಗಪುರದಿಂದ ಬರುತ್ತಿದ್ದ ಆ ಪಾರ್ಥಿವ ಶರೀರವನ್ನು ಬರಮಾಡಿಕೊಳ್ಳಲು ಅಸಂಖ್ಯ ಜನ ರಾತ್ರಿಯೇ ಗುವಾಹಟಿಯ ವಿಮಾನ ನಿಲ್ದಾಣದವರೆಗೆ ತೆರಳಿ, ಅಲ್ಲಿ ಠಿಕಾಣಿ ಹೂಡಿದ್ದರು. ಆ ಗಾಯಕನ ಶರೀರ ವಿಮಾನ ನಿಲ್ದಾಣದಿಂದ ಮೂವತ್ತು ಕಿ.ಮೀ. ದೂರದ ಮನೆ ತಲುಪಲು ಬರೋಬ್ಬರಿ ಆರು ಗಂಟೆ ತೆಗೆದುಕೊಂಡಿತು. ಅಷ್ಟೊಂದು ಪ್ರೀತಿ ಸಂಪಾದಿಸಿದ್ದ ಸಂಗೀತಗಾರ ಯಾರಿರಬಹುದು ಎಂಬ ಪ್ರಶ್ನೆ ನಿಮ್ಮನ್ನು ಕಾಡುತ್ತಿದೆಯೇ? ಅವರೇ ಅಸ್ಸಾಂನ ಗಾಯಕ ಜುಬಿನ್ ಗರ್ಗ್. ತಮ್ಮ ಬದುಕಿನ ಕ್ಯಾನ್ವಾಸ್‌ಅನ್ನು ಮೀರಿ ಬೆಳೆದ ಕಲಾವಿದ ಅವರು. ಬ್ರಹ್ಮಪುತ್ರ ನದಿಯ ಪ್ರವಾಹದಂತಹ ಅಭಿಮಾನದ ದೊಡ್ಡ ಹೊಳೆಯನ್ನೇ ಹೊಂದಿದವರು. ಸಿಂಗಪುರದಲ್ಲಿ ಸ್ಕೂಬಾ ಡೈವಿಂಗ್ ಸಾಹಸಕ್ಕೆ ಇಳಿದು, ದುರಂತ ಅಂತ್ಯವನ್ನು ಕಂಡವರು.

ಜಗತ್ತಿನ ನಲವತ್ತು ಭಾಷೆಗಳಲ್ಲಿ 38 ಸಾವಿರಕ್ಕೂ ಹೆಚ್ಚು ಹಾಡುಗಳನ್ನು ಹಾಡಿರುವ ಜುಬಿನ್, ನಿಸ್ಸಂಶಯವಾಗಿ ದೈತ್ಯಶಕ್ತಿಯ ಕಲಾವಿದ. ಬಾಲಿವುಡ್‌ನ 'ಗ್ಯಾಂಗ್‌ಸ್ಟರ್' ಚಿತ್ರದಲ್ಲಿ ಅವರು ಹಾಡಿದ 'ಯಾ ಅಲಿ' ಹಾಡು ಈಗಲೂ ಸಿನಿಮಾಪ್ರಿಯರ ನೆಚ್ಚಿನ ಗೀತೆ. ತಮ್ಮ ನಟನೆಯಿಂದ, ನಿರ್ದೇಶನದಿಂದ ಬೀದಿ ನಾಟಕಗಳಿಂದ ಈ ಕಲಾವಿದ ಅಪಾರ ಜನಪ್ರಿಯತೆ ಗಳಿಸಿದ್ದು ಹೌದು. ಭೌಗೋಳಿಕ, ಧರ್ಮ, ಅಂತಸ್ತುಗಳ ಗಡಿಗಳೆಲ್ಲವನ್ನೂ ಮೀರಿ, ಹಲವು ತಲೆಮಾರುಗಳನ್ನು ಪ್ರಭಾವಿಸಿದವರು ಮತ್ತು ಅವರಿಂದ ಪ್ರೀತಿಯನ್ನು ಗಳಿಸಿದವರು ಜುಬಿನ್.

ಸಂಗೀತ ಕಛೇರಿಯ ಸಭಾಂಗಣಗಳು, ನಾಟಕಗಳಿಗೆ ವೇದಿಕೆಯಾದ ರಂಗಮಂಚಗಳ ಆಚೆಗೂ ಜುಬಿನ್ ಭಾರಿ ಸದ್ದು ಮಾಡಿದವರು. ಒಂದರ ಮೇಲೊಂದರಂತೆ ವಿವಾದವನ್ನು ಮೈಮೇಲೆ ಎಳೆದುಕೊಂಡವರು. ಯಾವುದೇ ವಿಷಯ ಇರಲಿ, ತಮಗೆ ತೋಚಿದ್ದನ್ನು ನಿರ್ದಾಕ್ಷಿಣ್ಯದಿಂದ ಹೇಳುವ ಎದೆಗಾರಿಕೆ ತೋರಿದವರು. ಪ್ರಾಣಿಗಳ ಮೇಲೆ ಇನ್ನಿಲ್ಲದ ಮಮತೆಯನ್ನು ವ್ಯಕ್ತಪಡಿಸಿದವರು. ತೊಂದರೆಯಲ್ಲಿದ್ದ ಬಡವರಿಗೆ ಸಹಾಯ ಹಸ್ತವನ್ನೂ ಚಾಚಿದವರು. ಪರಿಸರದ ಮೇಲೆ ಅಪಾರ ಕಾಳಜಿಯನ್ನು ತೋರಿದವರು. ಹೀಗಾಗಿ ಅವರನ್ನು ಪ್ರೀತಿಸಲು ಜನರಿಗೆ ಬೇಕಾದಷ್ಟು ಕಾರಣಗಳಿದ್ದವು.

ಭೂಪೇನ್ ಹಜಾರಿಕಾ ಅವರ ಸಂಗೀತ ಪರಂಪರೆಗೆ ಚ್ಯುತಿ ತರುತ್ತಿದ್ದಾರೆ ಎಂಬ ಆಕ್ಷೇಪಗಳು ತೀವ್ರವಾಗಿ ಕೇಳಿಬಂದರೂ ಹೊಸ ಪ್ರಯೋಗಗಳಿಗೆ ಇಳಿಯುವುದನ್ನು ಜುಬಿನ್ ಬಿಟ್ಟುಕೊಡಲಿಲ್ಲ. ಹೊಸ ತಲೆಮಾರಿನ ಪೀಳಿಗೆಗೆ ತಾಜಾತನದ ಸಂಗೀತದ ಅಲೆಯೊಂದು ಅವರ ಪ್ರಯೋಗಗಳಲ್ಲಿ ಕಾಣಿಸಿತು. ಅಸ್ಸಾಂನ ಸಂಗೀತಪ್ರಿಯರು ಅವರನ್ನು ಹೊಸ ಅಲೆಯ ನಿರ್ಮಾತೃ ಎಂದೇ ಗುರುತಿಸತೊಡಗಿದರು. ಬಿಹು ಸಮಾರಂಭಗಳಲ್ಲಿ ಹಿಂದಿ ಹಾಡುಗಳನ್ನು ಹಾಡಬಾರದು ಎಂಬ ಉಲ್ಫಾ ಉಗ್ರ ಸಂಘಟನೆಯ ಬೆದರಿಕೆಗೆ ಅವರು ಬಗ್ಗಲಿಲ್ಲ. ಹಾಗೆಯೇ ವೈಷ್ಣವ ಸಂಘಟನೆಗಳ ಮುಖ್ಯಸ್ಥರನ್ನೂ ಅವರು ಎದುರು ಹಾಕಿಕೊಳ್ಳದೆ ಬಿಡಲಿಲ್ಲ. ಅವರನ್ನು 'ಪ್ರಭು ಈಶ್ವರ' ಎಂದು ಕರೆಯುವ ಅಗತ್ಯವಿಲ್ಲ, ಅವರೂ ಮನುಷ್ಯರೇ ಎಂದು ದೊಡ್ಡ ಧ್ವನಿಯಲ್ಲಿ ಹೇಳಿದವರು. ಚುನಾವಣೆ ಪ್ರಚಾರ ಸಭೆಯಲ್ಲಿ ತಮ್ಮ ನೃತ್ಯ ಶೈಲಿಯನ್ನು ಅನುಕರಿಸಿದ ಮುಖ್ಯಮಂತ್ರಿ ಹಿಮಂತ ಬಿಸ್ವ ಶರ್ಮಾ ಅವರಿಗೆ 'ಕಾಪಿರೈಟ್' ಶುಲ್ಕ ನೀಡುವಂತೆ ಕೇಳಿದರು! ಪೌರತ್ವ ತಿದ್ದುಪಡಿ ಕಾಯ್ದೆ (ಸಿಎಎ) ವಿರುದ್ಧ ಜನರೊಂದಿಗೆ ಬೀದಿಗಿಳಿದ ಗಾಯಕ–ನಾಯಕ ಅವರು.

ಚುನಾವಣೆ ಸಂದರ್ಭದಲ್ಲಿ ಬಿಜೆಪಿಗೆ ಪ್ರಚಾರ ಗೀತೆ ಹಾಡಿದ್ದ ಅವರು ಒಂದು ವರ್ಗದಿಂದ ತೀವ್ರ ಟೀಕೆಗೆ ಗುರಿಯಾಗಿದ್ದರು. 'ದುಡ್ಡು ಕೊಟ್ಟರೆ ನಾನು ಯಾರಿಗಾದರೂ ಹಾಡುವೆ. ಹಿಂದೆ ಕಾಂಗ್ರೆಸ್‌ಗೆ ಕೂಡ ಹಾಡಿರುವೆ. ವೈಯಕ್ತಿಕವಾಗಿ ನಾನು ರಾಜಕೀಯೇತರ ವ್ಯಕ್ತಿ. ನಾನೊಬ್ಬ ಗಾಯಕನಷ್ಟೆ' ಎಂದು ಅವರು ಸ್ಪಷ್ಟನೆ ನೀಡಿದ್ದರು. ಜುಬಿನ್ ಅವರ ಹಿತೈಷಿಗಳು ವಿವಾದಾತ್ಮಕ ಹೇಳಿಕೆಗಳಿಂದ ದೂರ ಇರುವಂತೆ ಅವರಿಗೆ ಪದೇ ಪದೇ ಕಿವಿಮಾತು ಹೇಳುತ್ತಿದ್ದರು. ಆದರೆ, 'ಫೆಂಟಾ, ಕಾಕೌ ಖಟೀರ್ ನೊ ಕೊರು (ನಾನು ಯಾರನ್ನೂ ಸಂತೃಪ್ತಗೊಳಿಸಬೇಕಿಲ್ಲ)' ಎಂದು ಮನಸ್ಸಿಗೆ ತೋಚಿದ್ದನ್ನು ಹೇಳಿಯೇ ಬಿಡುತ್ತಿದ್ದರು. ಯುವಪೀಳಿಗೆಗೆ ಅವರ ಈ ಧಾಡಸಿ ಸ್ವಭಾವ ಹಿಡಿಸಿಬಿಟ್ಟಿತ್ತು.

ಜುಬಿನ್ ಅವರ ಮೊದಲ ಹೆಸರು ಜೀಬೊನ್ ಬೊರ್ಥಾಕುರ್. ಅವರದು ಅಸ್ಸಾಂನ ಬ್ರಾಹ್ಮಣರ ಕುಟುಂಬ. ಆದರೆ, ನಾನು ಯಾವುದೇ ಜಾತಿ, ಕುಲಕ್ಕೆ ಸೇರಿದವನಲ್ಲ. ನನ್ನದು ಮಾನವ ಧರ್ಮ ಎಂದು ಸಾರಿದ ಜುಬಿನ್, ತಮ್ಮ ಹೆಸರಿನೊಂದಿಗೆ ಜಾತಿಸೂಚಕವಾಗಿದ್ದ ಮನೆತನದ ಹೆಸರನ್ನು ಬಿಟ್ಟುಕೊಟ್ಟರು. ಜುಬಿನ್ ಮೆಹ್ತಾ ಸಂಗೀತದ ಮೇಲಿನ ಅಭಿಮಾನದ ಕಾರಣದಿಂದ ಅವರ ಹೆಸರು ಕೂಡ ಜೀಬೊನ್‌ನಿಂದ ಜುಬಿನ್ ಆಯಿತು. ತಮ್ಮ ಮೂರನೇ ವರ್ಷದಿಂದಲೇ ಅವರು ಹಾಡಲು ಶುರು ಮಾಡಿದರು. ಮುಂಬೈನಲ್ಲಿ ನೆಲೆ ನಿಂತು ಕೈತುಂಬಾ ದುಡ್ಡು ಮಾಡಿದ ಜುಬಿನ್, ಅಶಿಸ್ತಿನ ಜೀವನ ಶೈಲಿಯನ್ನೂ ರೂಢಿಸಿಕೊಂಡಿದ್ದರು. ಹೀಗಾಗಿ ಅವರ ಆರೋಗ್ಯ ಪದೇ ಪದೇ ಕೈಕೊಡುತ್ತಿತ್ತು. ಆಸ್ಪತ್ರೆಯಲ್ಲಿ ಅವರು ಚಿಕಿತ್ಸೆಗಾಗಿ ದಾಖಲಾದಾಗಲೆಲ್ಲ ಅಭಿಮಾನಿಗಳು ಪ್ರವಾಹೋಪಾದಿಯಲ್ಲಿ ಹರಿದು ಬರುತ್ತಿದ್ದರು. 'ನನಗೆ ಏನೂ ಆಗುವುದಿಲ್ಲ. ನನ್ನ ಹಲವು ಕನಸುಗಳನ್ನು ಇನ್ನೂ ನನಸು ಮಾಡಬೇಕಿದೆ' ಎಂದು ಹೇಳುತ್ತಿದ್ದರು. ಆದರೆ, ಅವರ ಎಷ್ಟೋ ಕನಸುಗಳು ನನಸಾಗುವುದು ಬಾಕಿ ಇರುವಾಗಲೇ ಬದುಕಿಗೆ ವಿದಾಯ ಹೇಳಿದ್ದಾರೆ. ■

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65